Notice of a question of breach of Privilage :

re : Reduction of reservation quata to Backward Classes :

† ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ ನಾವು ಈಗಾಗಲೇ ಪ್ರಸ್ತಾವ ಮಾಡಿದ ಹಾಗೆ ಈ ಸದನಕ್ಕೆ ಸಂಭಂಧಪಟ್ಟಂತೆ ಹಕ್ಕು ಭಾಧ್ಯತೆ ವಿಷಯವಾಗಿ ತವಂಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ವಿಷಯವೇನೆಂದರೆ ಈವತ್ತಿನ ದಿವಸ ಪತ್ರಿಕೆಗಳಲ್ಲಿ ಸರ್ಕಾರದವರು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಏನು ರಿಸರ್ವೇಷನ್ ಮಾಡಿದ್ದರು, ಆ ರಿಸರ್ವೇಷನ್‌ನಲ್ಲಿ ಎರಡು ಪರ್ಸೆಂಟ್ ಕೋತ ಮಾಡಿದ್ದಾರೆ. ೨೦ ಪರ್ಸೆಂಟ್ ರಿಸರ್ವೇಷನ್ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಇದ್ದುದನ್ನು ೧೮ ಪರ್ಸೆಂಟ್‌ಗೆ ಇಳಿಸಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿರುತ್ತದೆ. ಸ್ವಾಮಿ ಇದು ಒಂದು ಬಹಳ ಮುಖ್ಯವಾದ **Major** decision of the Government ಎಂದು ಹೇಳಬೇಕಾಗುತ್ತದೆ. Definitely and undoubtedly it is a major decision of the Government. ಹೇಗೆ ಹಾವನೂರು ಕಮಿಷನ್ ವರದಿಯನ್ನು ಸರ್ಕಾರ ಪರಿಶೀಲನೆ ಮಾಡಿ ಒಪ್ಪಿಕೊಂಡು ರಿಸರ್ವ್ ಮಾಡಿದರು ಮತ್ತೆ ಅದರಲ್ಲಿ ಕಡಿಮೆ ಮಾಡಿರತಕ್ಕಂಥಾದ್ದು ಕೂಡ ಅಷ್ಟೇ ಮಹತ್ವದ್ದಾರಿರುತ್ತದೆ. ಸರ್ಕಾರ ಈ ಒಂದು ಮಹತ್ವವಾದ ನಿರ್ಣಯವನ್ನು ತೆಗೆದುಕೊಂಡು ಅನೌನ್ಸ್ ಮಾಡುವುದಕ್ಕೆ ಮುಂಚೆ ಶಾಸನಸಭೆಯು ನಡೆಯುತ್ತಿರುವಾಗ ಶಾಸನಸಭೆಗೆ ಮೊದಲು ತಿಳಿಸತಕ್ಕಂಥಾದ್ದು ಸರ್ಕಾರದ ಕರ್ತವ್ಯವಾಗಿರುತ್ತದೆ. ಇಲ್ಲದಿದ್ದರೆ ಇದು ಸರ್ಕಾರಕ್ಕೆ ಪ್ರಿವಿಲೈಚ್ ಆಗುತ್ತದೆ. ಪ್ರಿವಿಲೈಜ್ ಎಂದು ತೆಗೆದುಕೊಂಡು ಸರ್ಕಾರದವರು ಗಂಭೀರವಾಗಿ ಒಪ್ಪಿಕೊಳ್ಳದಿದ್ದರೆ it is a matter of propriety ಏತಕ್ಕೆಂದರೆ this House is the matter. ಆದ್ದರಿಂದ ಸದನಕ್ಕೆ ತಿಳಿಸಬೇಕಾಗಿತ್ತು. ಸದನಕ್ಕೆ ತಿಳಿಸದೆ ಹೋದರೆ ಸರ್ಕಾರ ಹಕ್ಕುಭಾದ್ಯತೆಗೆ ಚ್ಯುತಿಯನ್ನು ತಂದಂತಾಗುತ್ತದೆ. ಎನ್ನ ತಕ್ಕಂಥ ಮಾತನ್ನು ನಾನು ಸ್ಪಷ್ಟ ಪಡಿಸಿಸುತ್ತೇನೆ. ಹೀಗಿರುವಾಗ ನಿನ್ನೆಯೋ ಮೊನ್ನೆಯೋ ಒಂದು ಸರ್ಕಾರೀ ಆಜ್ಞೆ ಹೊರಟಿದೆ. ಆ ವಿಷಯವನ್ನು ಈ ಸದನದ ಗಮನಕ್ಕೆ ತಂದಿಲ್ಲ. ಇದರಿಂದಾಗಿ ಈ ಸಭೆಯ ಹಕ್ಕು ಭಾಧ್ಯತೆಗಳ ಚ್ಯುತಿಯಾಗಿದೆ, ಹಕ್ಕು ಭಾದ್ಯತೆಗಳ ಉಲ್ಲಂಘನೆಯಾಗಿದೆಯೆಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ ಏಕೆಂದರೆ ಇದು ಒಬ್ಬ ಸದಸ್ಯನ ಅಥವಾ ಇಬ್ಬರೂ ಸದಸ್ಯರ ಅಥವಾ ಸರ್ಕಾರದ ಪ್ರಶ್ನೆಯಲ್ಲ. It is a question of propriety of the Government. It is the Privilege of the Members that they should get the first-hand information of the major policy decision of the Government. ಇಲ್ಲಿ ಸದನ ನಡೆಯುತ್ತಿರುವುದರಿಂದ ಸದನಕ್ಕೆ ಮೊದಲು ತಿಳಿಸಬೇಕಾಗಿತ್ತು. ಸಭೆ ನಡೆಯದೇ ಇರುವಾಗ ಸರ್ಕಾರದವರು ಯಾವುದೇ ನಿರ್ಧಾರಗಳನ್ನು ತೆಗೆದುಕೊಂಡರೂ ಸದನಕ್ಕೆ ತಿಳಿಸಬೇಕು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಸದನದ ಕಾರ್ಯಕಲಾಪ ನಡೆಯುತ್ತಿದ್ದಾಗ it is the privilege of the members to get the first-hand information of the major policy decision of the Government.—೨೦ ಪರ್ಸೆಂಟ್ ರಿಸರ್ವೇಷನ್ ಹಿಂದುಳಿದ ವರ್ಗಗಳಿಗೆ ಇದ್ದುದನ್ನು ೧೮ ಪರ್ಸೆಂಟ್‌ಗೆ ಇಳಿಸಿದ್ದೀರಿ. It is a major decision of the policy of the Government. ಅದನ್ನು ಸದನಕ್ಕೆ ತಿಳಿಸಿಲ್ಲ. ಸರ್ಕಾರದವರು ಈ ರೀತಿಯಿಂದ ಈ ಸದನದ ಹಕ್ಕುಭಾದ್ಯತೆಗಳ ಚ್ಯುತಿ ಮಾಡಿದ್ದಾರೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕೆಂದು ನಾನಂ ಮಾನ್ಯ ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—Major Policy decision ತೆಗೆದುಕೊಳ್ಳುವಾಗ ಸಭೆ ನಡೆಯುತ್ತಿದ್ದರೆ ಅದನ್ನು ಸಭೆಯ ಗಮನಕ್ಕೆ ತರಬೇಕು ಎಂಬ ವಾದ ಏನಿದೆ ಆ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ, ಆದರೆ ಇವತ್ತು ಪತ್ರಿಕೆಯಲ್ಲಿ ಬಂದಿರತಕ್ಕ ವಿಷಯ ಏನೆಂದರೆ...

(ಆ ಸಂದರ್ಭದಲ್ಲಿ ವಿದ್ಯುಚ್ಚಕ್ತಿ ನಿಂತುಹೋಗಿ ಕಲಾಪ ಸ್ಥಗಿತವಾಯಿತು)

ಹೈಕೋರ್ಟಿನ ನಿರ್ಣಯದ ಪ್ರಕಾರ ಕೆಲವು ಜಾತಿಗಳನ್ನು ಹಿಂದುಳಿದ ಪಂಗಡಕ್ಕೆ ಏನು ಸೇರಿಸಿದ್ದರು ಅದನ್ನು ತೆಗೆದುಹಾಕಿದ ಮೇಲೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇಟ್ಟಿದ್ದರಲ್ಲಿ ೨೦ ಪರ್ಸೆಂಟ್‌ನಿಂದ ೧೮ ಪರ್ಸೆಂಟ್‌ಗೆ ಹೈಕೋರ್ಟಿನ ತೀರ್ಮಾನಕ್ಕೆ ಬದ್ಧವಾಗಿ ಸರ್ಕಾರ ಹೊಕುಂ ಮಾಡಿದೆ. ಆ ಬಗ್ಗೆ

ಮಾನ್ಯ ಕಾನೂನು ಮಂತ್ರಿಗಳು ನಿನ್ನೆ ಸ್ಪಷ್ಟೀಕರಣ ನೀಡಿದ್ದಾರೆ. ಅಷ್ಟೇ ವಿನಹ ಬೇರೆ ಯಾವುದೇ ಹೊಸ ನಿರ್ಧಾರಗಳನ್ನು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಮಾಡಿಲ್ಲ. ಹೈಕೋರ್ಟಿನ ತೀರ್ಮಾನ ಆ ರೀತಿ ಬಂದಿದ್ದರಿಂದ ಅನಿವಾರ್ಯವಾಗಿ ಆ ರೀತಿ ಮಾಡಬೇಕಾದುದು ನಮ್ಮ ಕರ್ತವ್ಯವೂ ಆಗಿರುವುದರಿಂದ ಸರ್ಕಾರ ಮಾಡಿದೆ. ಆ ರೀತಿ ಮಾಡದೇ ಹೋಗಿದ್ದರೆ ಅದು ಕೂಡ ಕೋರ್ಟ್ ನಿಂದನೆ ಆಗುವಂಥ ಪರಿಸ್ಥಿತಿ ಆಗುತ್ತಿತ್ತು. ಈ ದೃಷ್ಟಿಯಿಂದ ಸರ್ಕಾರ ಈ ರೀತಿ ಮಾಡಿದೆ. ಮಾನ್ಯ ಕಾನೂನು ಮಂತ್ರಿಗಳು ಈ ಬಗ್ಗೆ ಈಗಾಗಲೇ ಸ್ಪಷ್ಟೀಕರಣ ನೀಡಿದ್ದಾರೆ. ಅಷ್ಟೇ ವಿನಹ ಇನ್ನೇನೂ ಮಾಡಿಲ್ಲ. ಪತ್ರಿಕಾ ಹೇಳಿಕೆಯಲ್ಲಿ ಕೂಡ ಇಷ್ಟು ವಿಷಯ ಮಾತ್ರವೇ ಇದೆಯೇ ವಿನಹ ಬೇರೆ ಏನೂ ಹೇಳಿಲ್ಲ. ಇದರಿಂದ ಹಕ್ಕುಚ್ಯುತಿಯಾದಂತೆ ಆಗುವುದಿಲ್ಲ. ಉದ್ದೇಶಪೂರ್ವಕವಾಗಿ ಸಭೆಯ ಗಮನಕ್ಕೆ ತರದೇ ಮಾನ್ಯ ಕಾನೂನು ಮಂತ್ರಿಗಳು ಹೊರಗಡೆ ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ. ಹೈಕೋರ್ಟ್ ತೀರ್ಮಾನ ಬಂದಿದ್ದರಿಂದ ಆ ಬಗ್ಗೆ ಸ್ಪಷ್ಟೀಕರಣ ನೀಡಿದ್ದಾರೆ. ಇದನ್ನು ಈ ರೀತಿ ಅರ್ಥ ಮಾಡಿಕೊಳ್ಳಬೇಕೇ ವಿನಹ ಇದಕ್ಕಿಂತ ಹೆಚ್ಚು ಅರ್ಥ ಕಲ್ಪಿಸಿಕೊಳ್ಳುವುದು ಸಮಂಜಸವಾದುದಲ್ಲವೆಂದು ನಾನು ಭಾವಿಸಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ.

ಅಧ್ಯಕ್ಷರು.—ಈಗ ನೀವು ಹೇಳಿರುವುದಕ್ಕೆ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಉತ್ತರ ನೀಡಿದ್ದಾರೆ. ನಾನು ರೂಲಿಂಗ್ ಕೊಡುತ್ತೇನೆ. ತಾವು ಮತ್ತೆ ಆ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೋ ಆ ವಿಷಯವಾಗಿಯೇ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಒಂದು ಸಾರಿ ತಮ್ಮ ಹೇಳಿಕೆಗೆ ಮಾನ್ಯ ಮಂತ್ರಿಗಳು ಉತ್ತರ ನೀಡಿದಮೇಲೆ ನಾನು ನನ್ನ ರೂಲಿಂಗ್ ಕೊಡುತ್ತೇನೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾನು ಚರ್ಚೆ ಮಾಡುತ್ತಿಲ್ಲ. ಮಾನ್ಯ ಮಂತ್ರಿಗಳು ಹೇಳಿದರು... ..

SRI S. M. SHEERNALI CHANDRASEKHAR.—Sir, I rise to a point of order. Before raising any privilage issue, leave has to be granted by the Chair. I would like to know whether the chair has granted leave to raise the issue.

MR. SPEAKER.—The hon. member is given an opportunity to have his preliminary say. We has to hear the hon. member and also the Minister for Parliamentary Affairs or the concerned Minister, and then I have to give my ruling.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸಂಸದೀಯ ಮಂತ್ರಿಗಳು ಒಂದು ಮಾತನ್ನು ಒಪ್ಪಿಕೊಂಡಿದ್ದಾರೆ; ಮಾನ್ಯ ಕಾನೂನು ಮಂತ್ರಿಗಳು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ.....

ಶ್ರೀ ಕೆ. ಎಚ್. ರಂಗನಾಥ್.—ಹೈಕೋರ್ಟ್ ತೀರ್ಮಾನಕ್ಕೆ ಸ್ಪಷ್ಟೀಕರಣ ನೀಡಿದ್ದಾರೆ. ಹೈಕೋರ್ಟಿನಲ್ಲಿ ಏನು ತೀರ್ಮಾನ ಆಗಿದೆಯೋ ಅದಕ್ಕೆ ಸ್ಪಷ್ಟೀಕರಣ ನೀಡಿದ್ದಾರೆ ಎಂದು ನಾನು ಹೇಳಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ಪಷ್ಟೀಕರಣ ನೀಡಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅದನ್ನು ಮೊದಲೇ ಸದನಕ್ಕೆ ಕೊಡಬೇಕಾಗಿತ್ತು. ಕಾನೂನು ಮಂತ್ರಿಗಳು ಈ ಸದನದ ಹೊರಗಡೆ ಹೇಳಿಕೆ ಕೊಡುವುದಕ್ಕಿಂತ ಈ ಸದನದ ಮುಖಾಂತರವೇ ಹೇಳಿಕೆ ನೀಡಿ ಸ್ಪಷ್ಟೀಕರಣ ನೀಡ ಬಹುದಾಗಿತ್ತು.

SRI K. H. RANGANATH.—It is the judgement in the open court. ಯಾವ ಯಾವ ಜಾತಿಗಳಿಗೆ ತೊಂದರೆಯಾಗಂತ್ತದೆ, ಏತಕ್ಕೆ ಆಗುತ್ತದೆ, ಏನಾಗುತ್ತದೆ, ಎಂಬುದರ ಬಗ್ಗೆ ಅವರು ಸ್ಪಷ್ಟೀಕರಣ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅದನ್ನೇ ಸದನದ ಮೂಲಕ ಕೊಡಬಹುದಾಗಿತ್ತಲ್ಲ ! ಕಾನ್‌ಸಿಕ್ವೆನ್‌ಷಿಯಲ್ ರಿಸಲ್ಟ್ ಎಂದು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. The consequential result has been given effect to by way of a Government Order; it is not a circular.

SRI K. H. RANGANATH.—There was no option but to issue a Government order. Otherwise the Govenment will be committing a contempt of the Court.

ಶ್ರೀ ಗೋವಿಂದ ಪಿ. ಒಡೆಯರಾಜ್—ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಸರ್ಕಾರೀ ಆಜ್ಞೆ ಏನಿದೆ ಅದನ್ನು ಈ ಸದನದ ಗಮನಕ್ಕೆ ಮುಂಚಿತವಾಗಿ ತಂದು ನಂತರ ಸ್ಪಷ್ಟೀಕರಣ ನೀಡಬಹುದಾಗಿತ್ತಲ್ಲ ಎಂದು ನಾನು ಹೇಳುತ್ತಿದ್ದೇನೆ.

MR. SPEAKER.—There are a number of rulings of this House, of Parliament and of the House of Commons that a policy statement made outside the House does not amont to a breach of privilege of the House. At best it is only a courtesy which the Government owes to this House and no question of privilage arises. In this case I note that there is no statement by any Minister. Only the contents of the Government order have been published in the papers. Hence there is no question of privilege in this issue.

Budjet Estimates for 1979-80 Demands for Grants.

Demand No: 30 (Debate Continued)

ಶ್ರೀ ಪಿ. ರಾಮದೇವ್.—ಸ್ವಾಮಿ, ಅರ್ಬನ್ ಡೆವಲಪ್‌ಮೆಂಟ್ ಬೇಡಿಕೆ ಮೇಲೆ ಮಾತನಾಡುವವರ ಪೈಕಿ ನಾನು ಮತ್ತು ಇನ್ನೊಬ್ಬರು ಉಳಿದುಕೊಂಡಿದ್ದೇವೆ. ಆದ್ದರಿಂದ ನಮಗೆ ಮಾತನಾಡುವುದಕ್ಕೆ ಐದೈದು ನಿಮಿಷ ಅದರೂ ಅವಕಾಶ ಕೊಡಬೇಕು.

ಅಧ್ಯಕ್ಷರು.— ಭಾಸ್ಕರ ಶೆಟ್ಟರೇ ನಿಮ್ಮ ಕಡೆಯಿಂದ ಯಾರಾದರೂ ಮಾತನಾಡುತ್ತಾರೆಯೇ ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಒಬ್ಬೊಬ್ಬರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾ ಹೋದರೆ ಬಹಳ ಕಾಲ ಹಿಡಿಯುತ್ತದೆ. ಎಲ್ಲರೂ ಮಾತನಾಡಬೇಕು ಎಂದು ಹೇಳುತ್ತಾರೆ. ಒಬ್ಬೊಬ್ಬರಿಗೆ ಐದೈದು ನಿಮಿಷ ಅಂದರೂ ಬಹಳ ಕಾಲ ಹಿಡಿಯುತ್ತದೆ.

(ಕೆಲವು ಜನತಾ ಸದಸ್ಯರು ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಂಡರು)

ಅಧ್ಯಕ್ಷರು.—ವಿರೋಧ ಪಕ್ಷದಲ್ಲಿ ಯಾರು ಯಾರು ಮಾತನಾಡಬೇಕೂ ಎಂಬ ಬಗ್ಗೆ ವಿರೋಧಪಕ್ಷದ ಸಚೇತಕರು ಹೆಸರುಗಳನ್ನು ಕೊಟ್ಟಿದ್ದಾರೆ. ಈಗ ಮತ್ತೆ ನನಗೂ ಮಾತನಾಡುವುದಕ್ಕೆ ಅವಕಾಶ ಕೊಡ ಬೇಕೆಂದು ಎಲ್ಲರೂ ಹೇಳುತ್ತಾ ಹೋದರೆ ಹೇಗೆ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಶ್ರೀಮಾನ್ ರಾಮ್‌ದೇವ್ ಅವರು ನಾನು ಈಗಾಗಲೇ ಕೊಟ್ಟರುವ ಪಟ್ಟಿಯಲ್ಲಿದ್ದಾರೆ. ಶ್ರೀಮಾನ್ ಮಲ್ಲಪ್ಪನವರು ಕೊನೆಯಲ್ಲಿ ಮಾತನಾಡುತ್ತೇನೆ ಎಂದು ಹೇಳಿದರು. ಅದನ್ನು ನಾನು ಬರೆದು ಕಳಿಸಿದ್ದೇನೆ. ನಂತರ ವಿಷಯದ ಗಂಭೀರತೆಯನ್ನು ಮತ್ತು ಮಹತ್ವವನ್ನು ಅರಿತುಕೊಂಡು ಮಾನ್ಯ ಸದಸ್ಯರಾದ ಜರ್ತಾರ್ಕರ್ ಅವರೂ ಮಾತನಾಡುತ್ತೇನೆ ಎಂದು ಹೇಳಿದ್ದಾರೆ.